ಸಾಕ್ಷಿಯನ್ನು ದಿಃ-15.04.2023 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಎದುರುದಾರರ ಪರ ವಕೀಲರಿಂದ ಃ-**

1. ನಮ್ಮ ಮದುವೆ ಆಗಿ 7 ½ ವರ್ಷ ಆಗಿರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ರೀತಿ ಒಡವೆಗಳು , ವಾಚು , ಬಟ್ಟೆ ಗಾಗಿ ದುಡ್ಡನ್ನು ಕೊಟ್ಟಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಒಡವೆ ಬಗ್ಗೆ ರಶೀದಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಮದುವೆಯಾದ ನಂತರ ಅಲದಹಳ್ಳಿಯಲ್ಲಿ ಒಂದು ವರ್ಷ ವಾಸ ಇದ್ದೆ. ನಾನು ಮದುವೆಯಾದ 3 ತಿಂಗಳಿಗೆ ಎದುರುದಾರರನ್ನು ಬಿಟ್ಟು ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಒಂದು ತಿಂಗಳು ವಾಸ ಇದ್ದೆ. ನಾನು ಬೆಂಗಳೂರಿನಲ್ಲಿ ವಾಸ ಇದ್ದಾಗ ಸಂಬಳವನ್ನು ನನ್ನ ಅತ್ತೆ ಕೈಗೆ ಕೊಡುತ್ತಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ವರದಕ್ಷಿಣೆಗಾಗಿ ಅವರ ತಾಯಿ ಮಾತು ಕೇಳಿಕೊಂಡು ಕಿರುಕುಳ ಕೊಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಎದುರುದಾರರು ವರದಕ್ಷಿಣೆ ಕಿರುಕುಳ ಕೊಡುತ್ತಿದ್ದರು ಎಂಬ ಬಗ್ಗೆ ಪೊಲಿಸ್ ಠಾಣೆಲಿ ದೂರನ್ನು ನೀಡಿರುತ್ತೇನೆ. ನನ್ನ ದೂರಿನ ಆಧಾರದ ಮೇಲೆ ಎಫ್ ಐ ಆರ್ ದಾಖಲಾಗಿತ್ತು. ಸಾಕ್ಷಿ ಸ್ವತಃ ಪೊಲಿಸ್ ಠಾಣೆಯಲ್ಲಿ ಮಾತುಕತೆ ನಡೆದು ಒಡವೆ ಹಾಗೂ ದುಡ್ಡನ್ನು ಎದುರುದಾರರು ಕೊಡಬೇಕು ಎಂದು ಮಾತುಕತೆ ಆಗಿತ್ತು ಎಂದು ಸ್ವತಃ ನುಡಿದಿದ್ದಾರೆ. 1 1/2 ಲಕ್ಷ ಹಣ ಮತ್ತು ಒಡವೆಗಳನ್ನು ಕೊಡಬೇಕು ಎಂದು ಮಾತುಕತೆ ಆಗಿತ್ತು. ಸದರಿ ಮಾತುಕತೆಯಂತೆ ಎದುರುದಾರರು ಮಾನ್ಯ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಎಂ ಸಿ 40/17 ರಲ್ಲಿ ಹಣವನ್ನು ಕೊಡಲು ಬಂದಿದ್ದರು ಎಂದರೆ ಸಾಕ್ಷಿ ಹಣವನ್ನು ಮಾತ್ರ ಕೊಡಲು ಬಂದಿದ್ದರು ನಾನು ಅದನ್ನು ತಗೆದುಕೊಂಡಿರುವುದಿಲ್ಲ ಏಕೆಂದರೆ ಅವರು ಒಡವೆಗಳನ್ನು ಕೊಟ್ಟಿರಲಿಲ್ಲ. ನಮ್ಮ ಮನೆಯವರು ಯಾವುದೇ ರೀತಿ ಒಡವೆಗಳನ್ನು ಮಾಡಿಕೊಟ್ಟಿಲ್ಲದಿರುವುದರಿಂದ ಎದುರುದಾರರ ಬಳಿ ಯಾವುದೇ ಒಡವೆಗಳು ಇಲ್ಲ ಎಂದರೆ ಸರಿಯಲ್ಲ. ಎದುರುದಾರ ಜೊತೆ ಜಗಳ ಮಾಡಿಕೊಂಡು ನಾನೆ ಎದುರುದಾರರ ಮನೆಯನ್ನು ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ಪಂಚಾಯಿತಿಯನ್ನು ಎಲ್ಲಿ ಯಾವ ದಿನಾಂಕದಂದು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಈಗ ನಮ್ಮ ಸೋದರ ಮಾವನ ಮನೆಯಲ್ಲಿ ವಾಸ ಇದ್ದೇನೆ.
2. ಎದುರುದಾರರಿಗೆ ಸಾಕಷ್ಟು ಆದಾಯ , ಜಮೀನು ಹಾಗೂ ಮೇಕೆಗಳು ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ಹೆಸರಿನಲ್ಲಿ ಇರುವ

ಜಮೀನಿನ ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ. ಆರ್ ಟಿ ಸಿ ಗಳನ್ನು ಹಾಜರುಪಡಿಸಲು ನನಗೆ ಜಮೀನಿನ ಸರ್ವೆ ನಂಬರು ಗೊತ್ತಿಲ್ಲ.

3. ನಾನು ಎದುರುದಾರರನ್ನು ಮತ್ತು ಅವರ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಅವರಿಗೆ ಕಿರುಕುಳ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೆ ಜಮೀನು ಇಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಮನೆಯಿಂದ ಹೊರಹಾಕಿಲ್ಲ , ನಾನೆ ಅವರ ಜೊತೆ ಬಾಳ್ವೆ ಮಾಡುವುದಿಲ್ಲ ಎಂದು ಮನೆಯಿಂದ ಹೊರಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹಿಂಸೆಯನ್ನು ತಾಳಲಾರದೆ ಎದುರುದಾರರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದರು ಕೂಡ ನಾನು ಅವರನ್ನು ಬಿಟ್ಟು ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾಸನದೊಡ್ಡಿಯ ಸಣ್ಣಪ್ಪ ಎಂಬುವವರು ಕೂಡ ನನಗೆ ಬುದ್ದಿ ಹೇಳಿದ್ದರು ಅವರ ಮಾತನ್ನು ಕೇಳದೆ ಎದುರುದಾರರನ್ನು ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೆ ಆದಾಯ ಮೂಲ ಇಲ್ಲ , ಅವರು ಯಾವುದೆ ಕೆಲಸಕ್ಕೆ ಹೋಗುತ್ತಿಲ್ಲ ನನಗೆ ಯಾವುದೇ ಜೀವನಾಂಶ ಕೊಡಲು ಎದುರುದಾರರು ಸಮರ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಆರೋಗ್ಯ ಸರಿ ಇಲ್ಲದೆ ಇರುವುದರಿಂದ ಅವರಿಗೆ ಯಾವುದೆ ಕೆಲಸ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಆದಾಯದ ಮೂಲ ಎಷ್ಟು ಇದೆ ಎಂದು ದಾಖಲೆಗಳನ್ನು ಹಾಜರುಪಡಿಸದೆ ಇರುವುದರಿಂದ ಎದುರುದಾರರಿಂದ ಜೀವನಾಂಶ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೆ ಜಮೀನು ಇರುವುದಿಲ್ಲ ಅವರು ಯಾವುದೆ ಕೆಲಸ ಮಾಡುವುದಿಲ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಿ ಮಾಹಿತಿ ನಾನೆ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ಗೊತ್ತಿದೆ.

**ಮರು ವಿಚಾರಣೆಃ- ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ, ಮಳವಳ್ಳಿ.